**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲುಃ- ಶ್ರೀ ಜಿ ಹೆಚ್ ಎಸ್ ವಕೀಲರಿಂದ 11 ರಿಂದ 16, 17 (ಎ) ಮತ್ತು (ಬಿ), 19 (ಎ) ಮತ್ತು (ಬಿ) , 21,23 (ಎ) ಮತ್ತು (ಬಿ), 24, 25 (ಎ) ರಿಂದ (ಸಿ), 27, 28 (ಎ) ರಿಂದ (ಸಿ) ಪ್ರತಿವಾದಿಯ ಪರವಾಗಿ.</u>**

19. ಈ ದಾವೆಗೆ ಸಂಬಂಧಿಸಿದ ಬೇರೆ ದಾಖಲೆಗಳು ನನ್ನ ಹತ್ತಿರ ಇರುವುದಿಲ್ಲ. ಮದ್ದಿನ ಖಾಸಿಂ ಸಾಬ್ ಮೂಲ ಪುರುಷ ಎಂದರೆ ಸರಿ. ಅವರು ಸುಮಾರು 50 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ಅವರಿಗೆ ಒಬ್ಬರೇ ಹೆಂಡತಿ ರಜಾಕ್ ಬೀ ಇದ್ದರು. ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಮದ್ದಿನ ಖಾಸಿಂ ಸಾಬ್ ರವರ ಜೀವಿತ ಕಾಲದಲ್ಲಿ ಅವರ ಮಗಳು ಖತೇಜಾ ಬೀ ತೀರಿಕೊಂಡಿದ್ದಳು. ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಖತೇಜಾ ಬೀ ನನ್ನ ತಂದೆಯ ತಾಯಿ ಇರುತ್ತಾರೆ. 7 ಜನ ವಾದಿಗಳು ಖತೇಜಾ ಬೀ ರವರ ವಾರಸುದಾರರು ಎಂದರೆ ಸರಿ. ಮದ್ದಿನ ಖಾಸಿಂ ಸಾಬ್, ರಜಾಕ್ ಸಾಬ್ ಹಾಗೂ ಖತೇಜಾ ಬೀ ಯಾವ ದಿನಾಂಕದಂದು ತೀರಿಕೊಂಡಿರುತ್ತಾರೆ ಎಂದು ನಿಖರವಾದ ದಿನಾಂಕವನ್ನು ಹೇಳಿರುವುದಿಲ್ಲ. ಖತೇಜಾ ಬೀ ರವರನ್ನು ಚಿತ್ರದುರ್ಗದಲ್ಲಿ ದಫನ್ ಮಾಡಲಾಗಿದೆ. ನಾನು ಅಥವಾ ಉಳಿದ ವಾದಿಗಳು ಮದ್ದಿನ ಖಾಸಿಂ ಸಾಬ್, ಖತೇಜಾ ಬೀ ಹಾಗೂ ರಜಾಕ್ ಬೀ ರವರನ್ನು ನೋಡಿರುವುದಿಲ್ಲ.

20. ಖತೇಜಾ ಬೀ ರವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಅವರ ಹೆಸರು ಬಷೀರ್ ಅಹ್ಮದ್ ಹಾಗೂ ಪ್ಯಾರೇ ಜಾನ್ ಇರುತ್ತದೆ. ನಿಪಿ-1 ರಲ್ಲಿ ಪ್ಯಾರೇ ಜಾನ್ ರವರ ಹೆಸರು ಇರುವುದಿಲ್ಲ ಎಂದರೆ ಗೊತ್ತಿಲ್ಲ. ನಿಪಿ-1 ದಾಖಲೆಯನ್ನು ನಾನು ನೋಡಿ ಪರಿಶೀಲಿಸಿ ಸಲ್ಲಿಸಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪ್ಯಾರೇ ಜಾನ್ ಖತೇಜಾ ಬೀರವರ ಮಗಳು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.ಪ್ಯಾರೇ ಜಾನ್ ಖತೇಜಾ ಬೀ ರವರ ಮೊದಲನೇ ಮಗಳು ಇರುತ್ತಾಳೆ. ಪ್ಯಾರೇ ಜಾನ್ ರವರ ಗಂಡನ ಹೆಸರು ಗೊತ್ತಿಲ್ಲ. ಅವರು ಎಲ್ಲಿ ಜನಿಸಿರುತ್ತಾರೆ ಹಾಗೂ ಎಲ್ಲಿ ಮದುವೆ ಆಗಿರುತ್ತದೆ ಎಂದು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಬಷೀರ್ ಅಹ್ಮದ್ 2006 ರಲ್ಲಿ ತೀರಿಕೊಂಡಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ. ನಾನು ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಬಷೀರ್ ಅಹ್ಮದ್ ರವರಿಗೆ ಒಬ್ಬಳೇ ಹೆಂಡತಿ ಇರುತ್ತಾಳೆ. ಅವರೇ 1 ನೇ ವಾದಿ. 1 ನೇ ವಾದಿ ಆರೋಗ್ಯವಂತರಾಗಿದ್ದಾರೆ ಎಂದರೆ ಸರಿ. 30 ವರ್ಷಗಳಿಂದ 1 ನೇ ವಾದಿ ಎಸ್ ಜೆ ಎಂ ಲೇಡಿಸ್ ಹಾಸ್ಟಲ್ ಹತ್ತಿರ ಇರುವ ವಿಳಾಸದಲ್ಲಿ ಇರುತ್ತಾರೆ. ಅವರು ವಾಸವಾಗಿರುವ ಮನೆ 85 X 20 ಅಡಿ ಇರುತ್ತದೆ. ಸದರಿ ಆಸ್ತಿಯ ಖಾತೆ ಅವರ ಹೆಸರಿನಲ್ಲಿ ಇರುವುದಿಲ್ಲ. ಸದರಿ ಸ್ವತ್ತು ಮದ್ದಿನ ಖಾಸಿಂ ಸಾಬ್ ಹೆಸರಿನಲ್ಲಿ ಇರುತ್ತದೆ. ಸದರಿ ಮನೆಯ ವಿದುತ್ ಶಕ್ತಿಯ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ.

21. ನಿಪಿ-2 ನ್ನು ನಮ್ಮ ತಂದೆಯ ಭಾಗ ಬಂದಿರುವುದಿಲ್ಲ ಎಂದು ತೋರಿಸಲು ಸಲ್ಲಿಸಿರುತ್ತೇನೆ. ಸದರಿ ಅಮಲ್ ಜಾರಿ ಪ್ರಕರಣದಲ್ಲಿ ನನ್ನ ತಂದೆ ಹಾಗೂ ಖುತೇಜಾ ಬೀ ಪಕ್ಷಗಾರರು ಇರುವುದಿಲ್ಲ. ನಮ್ಮ ತಂದೆ ಪರಿಹಾರ ಹಣ ಕೋರಿ ಷಹಾಬುದ್ದೀನ್ ವಕೀಲರ ಮೂಲಕ ಅಮಲ್ ಜಾರಿ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿದ್ದೇವು ಎಂದರೆ ಸರಿಯಲ್ಲ. ಪರಿಹಾರ ಹಣದಲ್ಲಿ ನಮಗೆ ಹಕ್ಕು ಇರುತ್ತದೆ ಎಂದು 2 ನೇ ವಾದಿ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿ ಯ ಬಗ್ಗೆ ಈ ದಾವೆಯಲ್ಲಿ ಹೇಳಿರುವುದಿಲ್ಲ ಎಂದರೆ ಗೊತ್ತಿಲ್ಲ.

22. ಸಿ.ಎಂ. ಫಜಲ್ ಸಾಬ್ ನನ್ನ ತಂದೆಯ ಮಾವನ ಮಗ ಇರುತ್ತಾರೆ. ಮೊಹಮ್ಮದ್ ಸಾಲದ್, ಅಬ್ದುಲ್ ಸತ್ತಾರ್, ಮೊಹಮ್ಮದ್ ಅಮೀರ್, ಮೊಹಮ್ಮದ್ ಅನ್ವರ್ ರವರು ನನ್ನ ಮಾವಂದಿರು ಇರುತ್ತಾರೆ. ಜಮುರುದ್ರೀನ್ ಸಾ ನಮ್ಮ ಸಂಬಂಧಿಕಳು ಇರುತ್ತಾಳೆ. ಮೊಹಮ್ಮದ್ ಖಾಸಿಂ ಸಾಬ್ ರವರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-3 ಪಹಣಿ ಪತ್ರಿಕೆ ಐದು ಪುಟದಾಗಿದ್ದು ನಾನು ಬರೀ ಪುಟ ಸಂಖ್ಯೆ.5 ನ್ನು ಮಾತ್ರ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ನಂ.56/3 ಎ 1 ಪಿ1 ಪಹಣಿ ಪತ್ರಿಕೆಯ ಐದು ಪುಟಗಳನುಕ್ನಿ ಸಲ್ಲಿಸದೇ ಅದರಲ್ಲಿ ಸ್ವಾಧೀನ ಅನುಭವದಲ್ಲಿ ಇರುವವರ ಹೆಸರುಗಳು ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.56 ಯಾವಾಗ ಫೋಡು ಆಗಿರುತ್ತದೆ ಎಂದು ಗೊತ್ತಿಲ್ಲ. ನಿಪಿ-4 ರ ಪೂರ್ತಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

23. ಸರ್ವೇ ನಂ. 56 ರಲ್ಲಿ ಈಗ 7 ಎಕರೆ 13 ಗುಂಟೆ ಜಮೀನು ಉಳಿದಿರುತ್ತದೆ. ರೈಲ್ವೆ ಇಲಾಖೆಯವರು ಎಷ್ಟು ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮದ್ದಿನ ಖಾಸಿಂ ಸಾಬ್ ರವರು ಇದ್ದಾಗ 10 ಎಕರೆ ಜಮೀನು ಇಂಡಸ್ಟ್ರಿಯಲ್ ಇಲಾಖೆಯವರು ಭೂಸ್ವಾಧೀನ ಪಡಿಸಿಕೊಂಡಿರುತ್ತಾರೆ.

ಭೂ ಸ್ವಾಧೀನವಾದ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಮದ್ದಿನ ಖಾಸಿಂ ಸಾಬ್ ರವರಿಗೆ ಒಟ್ಟು 37 ಎಕರೆ ಜಮೀನು ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಮದ್ದಿನ ಖಾಸಿಂ ಸಾಬ್ ರವರ ಆಸ್ತಿಯ ವಿರುದ್ಧ ಖುತೇಜಾ ಬೀ ಅಥವಾ ಅವರ ವಾರಸುದಾರರು ಯಾವುದೇ ದಾವೆಯನ್ನು ಆಸ್ತಿ ಕೇಳಿ ಹಾಕಿರಲಿಲ್ಲ. ನನ್ನ ತಂದೆ ದಾವೆ ಹಾಕಿದ್ದರು ಎಂದು ಕೇಳಿರುತ್ತೇನೆ. ನಮ್ಮ ತಂದೆ ದಾವೆ ಹಾಕಿರುವುದನ್ನು ಈ ದಾವೆಯಲ್ಲಿ ಹೇಳಿರವುದಿಲ್ಲ.

24. ನನ್ನ ತಂದೆ ಬಷೀರ್ ಸಾಬ್ 2006 ರಲ್ಲಿ ತೀರಿಕೊಂಡಿರುತ್ತಾರೆ. ಅವರ ಮರಣ ದಿನಾಂಕವನ್ನು ಈ ದಾವೆಯಲ್ಲಿ ಹೇಳಿರುವುದಿಲ್ಲ. ನಿಪಿ-5 ರಲ್ಲಿ ದಿನಾಂಕಃ 24.03.2015 ದರ ರಶೀದಿ ಹಣವನ್ನು ನನ್ನ ಅಣ್ಣ 2 ನೇ ವಾದಿ ಕಟ್ಟಿರಬಹುದು. 2015 ರಲ್ಲಿ ನನ್ನ ತಂದೆ ತೀರಿಕೊಂಡಿದ್ದರು ಎಂದರೆ ಸರಿ. ನಿಪಿ-5 ಯನ್ನು ನನ್ನ ತಾಯಿ ನನಗೆ ನೀಡಿರುತ್ತಾರೆ. ನನ್ನ ತಂದೆಯ ಹೆಸರು ಬಷೀರ್ ಅಹಮ್ಮದ್ ತಂದೆ ನಜೀರ್ ಅಹಮ್ಮದ್ ಇರುತ್ತದೆ. ಬಷೀರ್ ಅಹಮ್ಮದ್ ತಂದೆ ವಜೀರ್ ಅಹಮ್ಮದ್ ನನ್ನ ತಂದೆ ಇರುವುದಿಲ್ಲ. ನಿಪಿ-5 ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ.

25. ನಿಪಿ-6 ತೆರಿಗೆ 2 ನೇ ವಾದಿ ಪಾವತಿಸಿರುತ್ತಾರೆ. ನಿಪಿ-6 ರಲ್ಲಿ ಖಾತೆ ನಂಬರ್ ಮತ್ತು ಅಸೆಸ್ಮೆಂಟ್ ಬರುವುದಿಲ್ಲ ಎಂದರೆ ಸರಿ. ನಿಪಿ-5 ಮತ್ತು 6 ರಲ್ಲಿ ಸರ್ವೇ ನಂ. ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ-5 ಮತ್ತು 6 ರಲ್ಲಿ ಹಣ ಪಾವತಿಸಿದವರು ಹಾಗೂ ಹಣ ಪಡೆದವರ ಸಹಿ ಇರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಈ ದಾವೆಗಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

26. ನಿಪಿ-7 ರಿಂದ 11 ಫೋಟೋಗಳ ಸಿ.ಡಿ.ಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಫೋಟೋಗಳನ್ನು ತೆಗೆಯಲು ಯಾರು ಹಣ ಕೊಟ್ಟಿರುತ್ತಾರೆ ಎಂದು ನಿಪಿ-12 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ಈ ದಾವೆಗಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು 7 ನೇ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಚಿತ್ರದುರ್ಗದಲ್ಲಿ ಹುಟ್ಟಿರುತ್ತೇನೆ. ಚಿತ್ರದುರ್ಗದಲ್ಲಿ ಸರ್ಕಾರಿ ಶಾಲೆಗಳಲ್ಲಿ ಓದಿರುತ್ತೇನೆ. ಸರ್ವೇ ನಂ.56/3 ಎ 1 ರಲ್ಲಿ ರೈಲ್ವೆ ಇಲಾಖೆ ಹಾಗೂ ಇಂಡಸ್ಟ್ರಿಯಲ್ ಇಲಾಖೆಯವರು ಭೂ ಸ್ವಾಧೀನ ಮಾಡಿಕೊಂಡಿರುತ್ತಾರೆ. ರೈಲ್ವೆ ಇಲಾಖೆಯವರು ಭೂ ಸ್ವಾಧೀನ ಮಾಡಿಕೊಂಡಿರುವುದು ಹಾಗೂ ಪರಿಹಾರ ಹಣ ನೀಡಿರುವುದನ್ನು ಈ ದಾವೆಯಲ್ಲಿ ಹೇಳಿರುವುದಿಲ್ಲ ಮತ್ತು ದಾಖಲೆಯನ್ನು ಸಲ್ಲಿಸಿರುವುದಿಲ್ಲ. ಚಿತ್ರದುರ್ಗ ರಾಯದುರ್ಗ

ರೈಲ್ವೆ ಹಳಿ ಮಾಡಿದಾಗ ಮದ್ದಿನ ಖಾಸಿಂ ಸಾಬ್‌ರವರ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು ಎಂದರೆ ಸರಿ. ಪಶ್ಚಿಮದಿಂದ ಪೂರ್ವದ ಮದ್ಯಕ್ಕೆ ರೈಲ್ವೆ ಹಳಿ ಹೋಗಿರುತ್ತದೆ ಎಂದರೆ ಸರಿ. 4 ಮತ್ತು 5 ನೇ ದಾವಾಸ್ವತ್ತಿನ ಮದ್ಯದಲ್ಲಿ ರೈಲ್ವೆ ಹಳಿ ಹೋಗಿರುತ್ತದೆ ಎಂದರೆ ಸರಿ. ಬಾಕಿ ಉಳಿದ ಉತ್ತರ ಮತ್ತು ದಕ್ಷಿಣದ ಜಮೀನನ್ನು ಈ ದಾವೆ ಹಾಕುವ ಮೊದಲು ಸರ್ವೆ ಮಾಡಿಸಿರುವುದಿಲ್ಲ. 4 ಮತ್ತು 5 ನೇ ದಾವಾಸ್ವತ್ತಿನ ಮದ್ಯದಲ್ಲಿ ರೈಲ್ವೆ ಹಳಿ ಹೋಗಿರುತ್ತದೆ ಎಂದು ನನ್ನ ದಾವೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುः-** ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ